**ಅ.ದಾವಾ. 163/2012** **ಪಿ.ಡಬ್ಲ್ಯೂ- 1**

**ದಿನಾಂಕಃ 26/11/2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀಸವಾಲುಃ- ಶ್ರೀ ಆರ್.ಡಿ.ಆರ್ ವಕೀಲರಿಂದ 1ನೇ ಪ್ರತಿವಾದಿಯ ಪರವಾಗಿ .**

ನಾನು ಮಿಡಲ್ ಸ್ಕೂಲ್ ವರೆಗೂ ಓದಿರುತ್ತೇನೆ. ನನಗೆ ಕನ್ನಡ ಓದಲು ಬರುತ್ತದೆ. ನನ್ನ ತಂದೆ ಮರಣ ಹೊಂದಿ ಸುಮಾರು 10 ವರ್ಷಗಳಾಯಿತು. ನನ್ನ ತಂದೆ ಮರಣ ಹೊಂದಿದ ಸುಮಾರು 2 ವರ್ಷಗಳ ನಂತರ ನನ್ನ ತಾಯಿ ಮರಣ ಹೊಂದಿರುತ್ತಾರೆ. ನಾವು 3 ಜನ ಪಾಲುಪಟ್ಟಿ ಮಾಡಿಕೊಂಡಿರುತ್ತೇವೆ ಎನ್ನುವ ಸಮಯದಲ್ಲಿ ಅಂದರೆ ದಿ. 05.04.1979 ರಂದು ನನ್ನ ತಂದೆ ತಾಯಿಗಳು ಬದುಕಿದ್ದರು. ನಮಗೆ ಪಿತ್ರಾರ್ಜಿತವಾಗಿ ನನ್ನ ತಂದೆಗೆ ಬಂದ ಜಮೀನುಗಳು ಆಲಗೌಡನಹಳ್ಳಿ ಗ್ರಾಮದಲ್ಲಿ ಇದ್ದವು ಎಂದರೆ ಸರಿ . ಸದರಿ ಗ್ರಾಮದಲ್ಲಿ ಹೊರತು ಪಡಿಸಿ ನನ್ನ ತಂದೆಗೆ ಬೇರೆ ಯಾವುದೇ ಗ್ರಾಮದಲ್ಲಿ ಪಿತ್ರಾರ್ಜಿತ ಆಸ್ತಿಗಳು ಇರಲಿಲ್ಲ.

ನನ್ನ ತಂದೆಗೆ ಆಲಗೌಡನಹಳ್ಳಿ ಗ್ರಾಮದ ಸರ್ವೇ ನಂ. 4 ರಲ್ಲಿ 8 ಗುಂಟೆ, ಸರ್ವೇ ನ್ಂ. 15 ರಲ್ಲಿ 2 ಎಕರೆ 23 ಗುಂಟೆ, ಸರ್ವೇ ನಂ. 18/1 ರಲ್ಲಿ 16 ಗುಂಟೆ, ಸರ್ವೇ ನಂ. 21 ರಲ್ಲಿ 3 ಎಕರೆ, ಸರ್ವೇ ನಂ. 28 ರಲ್ಲಿ 1 ಎಕರೆ 30 ಗುಂಟೆ, ಸರ್ವೇ ನಂ. 95 ರಲ್ಲಿ 4 ಎಕರೆ ಹಾಗೂ 2 ನಾಡ ಹಂಚಿನ ಮನೆಗಳು ಪಿತ್ರಾರ್ಜಿತವಾಗಿ ಬಂದಿರುವ ಸ್ವತ್ತುಗು ಎಂದರೆ ಸರಿ . ದಿ. 05.04.1979 ರಂದು ನಾನು, ನನ್ನ ಇಬ್ಬರು ಅಣ್ಣಂದಿರಾದ ಪ್ರತಿವಾದಿಯರು ಹಾಗೂ ನನ್ನ ತಂದೆ ಸೇರಿ ಪಾಲುಪಟ್ಟಿಯನ್ನು ಮಾಡಿಕೊಂಡಿರುತ್ತೇವೆ ಎಂದರೆ ಸರಿ . ಸದರಿ ಪಾಲುಪಟ್ಟಿಯ ಪ್ರಕಾರ ನನಗೆ ಸರ್ವೇ ನಂ. 4 ರಲ್ಲಿ ನಿಮಗೆ 1 ಗುಂಟೆ ಸ್ವತ್ತು ಬಂದಿರುತ್ತದೆ ಎಂದರೆ ಸಾಕ್ಷಿಯು ನನಗೆ 3 ಗುಂಟೆ ಸ್ವತ್ತು ಬಂದಿರುತ್ತದೆ ಎಂದು ನುಡಿಯುತ್ತಾರೆ.

ಸರ್ವೇ ನಂ. 4 ರಲ್ಲಿ 8 ಗುಂಟೆ ಜಮೀನು ಮಾತ್ರ ಇತ್ತು ಎಂದರೆ ಸರಿ . ಸರ್ವೇ ನಂ. 4 ರಸ್ವತ್ತಿನಲ್ಲಿ ಒಂದು ರಸ್ತೆ ಹಾದು ಹೋಗಿರುತ್ತದೆ ಎಂದರೆ ಸರಿ . ಸದರಿ ರಸ್ತೆಗೆ ಸರ್ವೇ ನಂ. 4 ರ 5 ಗುಂಟೆ ಜಮೀನು ಭೂ ಸ್ವಾಧೀನ ಆಗಿರುತ್ತದೆ ಎಂದರೆ ಸರಿ . ಸದರಿ ರಸ್ತೆ ಕಿಕ್ಕೇರಿಗೆ ಹೋಗುವ ರಸ್ತೆ ಎಂದರೆ ಸರಿ . 5 ಗುಂಟೆ ಭೂ ಸ್ವಾಧೀನ ಆದ ನಂತರ ಸದರಿ ಸರ್ವೇ ನಂಬರ್ ನಲ್ಲಿ ಉಳಿದಿರುವುದು ಕೇವಲ 3 ಗುಂಟೆ ಜಮೀನು ಎಂದರೆ ಸರಿ . ನಾನು ಹಾಗೂ ಪ್ರತಿವಾದಿಯರು ಸದರಿ 3 ಗುಂಟೆಯಲ್ಲಿ ಸಮವಾಗಿ ಸ್ವಾಧೀನದಲ್ಲಿ ಇದ್ದೆವೆ ಎಂದರೆ ಸರಿ .

ನಾನು ಸ್ವಾಧೀನ ಇರುವ 1 ಗುಂಟೆ ಜಮೀನಿನ ಪೂರ್ವಕ್ಕೆ 1ನೇ ಪ್ರತಿವಾದಿಯ ಜಮೀನು, ಪಶ್ಚಿಮಕ್ಕೆ 2 ನೇ ಪ್ರತಿವಾದಿಯ ಜಮೀನು, ಉತ್ತರಕ್ಕೆ ಕಿಕ್ಕೇರಿ ರಸ್ತೆ, ದಕ್ಷಿಣಕ್ಕೆ ಬಸವರಾಜಪ್ಪರವರ ಜಮೀನು ಇರುತ್ತದೆ. ಸದರಿ 1 ಗುಂಟೆ ಜಮೀನಿನ ಸ್ವಾಧೀನಕ್ಕೆ 1 ನೇ ಪ್ರತಿವಾದಿ ಯಾವತ್ತು ತೊಂದರೆ ನೀಡಿಲ್ಲ ಹಾಗೂ ಒತ್ತುವರಿ ಮಾಡಿಲ್ಲ ಎಂದರೆ ಸರಿ .

ಸರ್ವೇ ನಂಬರ್ 15 ರಲ್ಲಿ ನನ್ನ ಹಿಸ್ಸೆಗೆ 1 ಎಕರೆ 1/2 ಗುಂಟೆ ಜಮೀನು ಬಂದಿರುತ್ತದೆ ಎಂದರೆ ಸರಿ . ಸದರಿ 1 ಎಕರೆ 1/2 ಗುಂಟೆ ಜಮೀನು 3 ಕಡೆ ಅಂದರೆ 1 ಕಡೆ, ಒಂದುವರೆ ಗುಂಟೆ, ಇನ್ನೊಂದು ಕಡೆ 19 ಗುಂಟೆ ಹಾಗೂ ಇನ್ನೊಂದು ಕಡೆ 20 ಗುಂಟೆ ಇರುವುದು ಎಂದರೆ ಸರಿ . ಸದರಿ 3 ಜಮೀನಿನ ಯಾವ ದಿಕ್ಕಿಗೂ 1ನೇ ಪ್ರತಿವಾದಿ ಇಲ್ಲ ಎಂದರೆ ಸರಿ . ಸದರಿ 1 ಎಕರೆ 1/2 ಗುಂಟೆ ಸ್ವತ್ತಿನ ನನ್ನ ಸ್ವಾಧೀನಕ್ಕೆ 1ನೇ ಪ್ರತಿವಾದಿ ಯಾವತ್ತು ತೊಂದರೆ ನೀಡಿಲ್ಲ ಎಂದರೆ ಸರಿ .

ಸರ್ವೇ ನಂಬರ್ 18/1 ರಲ್ಲಿ ನನಗೆ 6 ಗುಂಟೆ ಜಮೀನು ಬಂದಿರುತ್ತದೆ ಎಂದರೆ ಸರಿ . ಸದರಿ 6 ಗುಂಟೆಯ ದಕ್ಷಿಣ ದಿಕ್ಕಿಗೆ 1ನೇ ಪ್ರತಿವಾದಿ ಇರುತ್ತಾರೆ. ಹಿಸ್ಸೆಯಾದ ದಿನದಿಂದಲೂ ಸದರಿ 6 ಗುಂಟೆಯನ್ನು

ನಾನೇ ಉಳುಮೆ ಮಾಡುತ್ತಿದ್ದೇನೆ ಎಂದರೆ ಸರಿ . 1 ನೇ ಪ್ರತಿವಾದಿ ಸದರಿ 6 ಗುಂಟೆ ಜಮೀನಿನ ನನ್ನ ಸ್ವಾಧೀನಕ್ಕೆ ಯಾವತ್ತೂ ತೊಂದರೆ ಮಾಡಿಲ್ಲ ಎಂದರೆ ಸರಿ .

ಸರ್ವೇ ನಂಬರ್ 21 ರಲ್ಲಿ ನನಗೆ 39 ಗುಂಟೆ ಜಮೀನು ಬಂದಿರುತ್ತದೆ ಎಂದರೆ ಸರಿ . ಸದರಿ 39 ಗುಂಟೆಯ ಯಾವ ದಿಕ್ಕಿಗೂ 1 ನೇ ಪ್ರತಿವಾದಿ ಲಗತ್ತಾಗಿ ಇಲ್ಲ ಎಂದರೆ ಸರಿ .

ಸರ್ವೇ ನಂಬರ್ 28 ರಲ್ಲಿ 15 ಗುಂಟೆ ಜಮೀನು ನನಗೆ ಬಂದಿರುತ್ತದೆ ಎಂದರೆ ಸರಿ . ಸದರಿ 15 ಗುಂಟೆ ಜಮೀನಿನ ಸ್ವಾಧೀನದಲ್ಲಿ ನಾನು ಇದ್ದೇನೆ. ಸದರಿ 15 ಗುಂಟೆಯ ಉತ್ತರ ದಿಕ್ಕಿಗೆ 1ನೇ ಪ್ರತಿವಾದಿ ಇರುತ್ತಾರೆ. ನಾನು ಸುಮಾರು 1 ವರ್ಷಗಳ ಹಿಂದೆ ಜಮೀನನ್ನು ಅಳತೆ ಮಾಡಿಸಿರುತ್ತೇನೆ. ಸದರಿ ಅಳತೆಗೆ ಸಂಬಂಧಪಟ್ಟ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ. ನನ್ನ ತಂದೆ ಗುರುತು ಮಾಡಿ ಹಂಚಿಕೊಟ್ಟಿರುವ ಜಮೀನಿನ ನನ್ನ ಸ್ವಾಧೀನಕ್ಕೆ 1ನೇ ಪ್ರತಿವಾದಿ ತೊಂದರೆ ಕೊಟ್ಟಿರುತ್ತಾರೆ. ನನಗೆ ನನ್ನ ತಂದೆ ಹಂಚಿಕೊಟ್ಟಿರುವ ಜಮೀನಿನ ಮೇಲ ಭಾಗದಲ್ಲಿ 1ನೇ ಪ್ರತಿವಾದಿ ಸ್ವಲ್ಪ ಜಮೀನನ್ನು ಉಳುಮೆ ಮಾಡಿದ್ದು. ಸದರಿ ವಿಚಾರ ನಾನು 1 ವರ್ಷದ ಹಿಂದೆ ಜಮೀನನ್ನು ಅಳತೆ ಮಾಡಿಸಿದ ಸಮಯದಲ್ಲಿ ತಿಳಿದಿರುತ್ತದೆ. ಆ ಬಗ್ಗೆ ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸರಿ .

ಸರ್ವೇ ನಂ. 28 ರಲ್ಲಿ 1ನೇ ಪ್ರತಿವಾದಿಗೆ ಬಂದಿರುವ 1 ಎಕರೆ ಸ್ವತ್ತಿನಲ್ಲಿ ಮಾತ್ರ ಅವರು ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿ . ನನ್ನ ತಂದೆ ತಾಯಿಗೆ ಯಾವುದೇ ಸಂಬಳ ಅಥವಾ ಪಿಂಚಣಿ ಬರುತ್ತಿರಲಿಲ್ಲ ಎಂದರೆ ಸರಿ . ನನ್ನ ತಂದೆ ತಾಯಿಯ ಜೀವನಾಂಶಕ್ಕೆಂದು ಸರ್ವೇ ನಂ.21 ರಲ್ಲಿ 1 ಎಕರೆಯನ್ನು ದಕ್ಷಿಣ-ಉತ್ತರವಾಗಿ ಬಿಟ್ಟಿದ್ದರು. ನನ್ನ ತಂದೆ ತಾಯಿಯ ಜೀವನಾಂಶಕ್ಕೆಂದು ಸರ್ವೇ ನಂ.21 ರಲ್ಲಿ ಜಮೀನನ್ನು ಬಿಟ್ಟಿರಲಿಲ್ಲ, ಸರ್ವೇ ನಂ. 95 ರಲ್ಲಿ 1 ಎಕರೆಯನ್ನು ಬಿಟ್ಟಿದ್ದರು ಎಂದರೆ ಸರಿಯಲ್ಲ.

ಸರ್ವೇ ನಂ.95 ರಲ್ಲಿ ನನಗೆ 2 ಎಕರೆ ಜಮೀನು ಬಂದಿತ್ತು. ಆ ಬಗ್ಗೆ ನ್ಯಾಯಾಲಯಕ್ಕೆ ದಾಖಲೆಯನ್ನು ಕೊಟ್ಟಿರುತ್ತೇನೆ. ಸರ್ವೇ ನಂ.95 ರಲ್ಲಿ ನನಗೆ 1 ಎಕರೆ ಮಾತ್ರ ಬಂದಿತ್ತು ಎಂದರೆ ಸರಿಯಲ್ಲ. ನನಗೆ ಸದರಿ ಸರ್ವೇ ನಂ. ನಲ್ಲಿ 2 ಎಕರೆ ಜಮೀನು ಬಂದಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪಾಲುಪಟ್ಟಿಯ ಪ್ರಕಾರ ಸರ್ವೇ ನಂ. 95ರಲ್ಲಿ ನಿಮ್ಮ ಹೆಸರಿಗೆ 1 ಎಕರೆ ಎಂದು ಇದ್ದು, ಆ ಪ್ರಕಾರ ನಿಮ್ಮ ಹೆಸರಿಗೆ 1 ಎಕರೆ ಸ್ವತ್ತಿಗೆ ಸಂಬಂಧಪಟ್ಟಂತೆ ಹಕ್ಕು ಬದಲಾವಣಾ ವಹಿ ಆಗಿರುತ್ತದೆ ಎಂದರೆ ಸಾಕ್ಷಿಯು ನನಗೆ ತಿಳುವಳಿಕೆ ಇರಲಿಲ್ಲ, ನನಗೆ ಸದರಿ ಸರ್ವೇ ನಂ. ನಲ್ಲಿ 2 ಎಕರೆ ಜಮೀನು ಬಂದಿರುವುದು ಎಂದು ನುಡಿಯುತ್ತಾರೆ.

ಈಗಲೂ ಕೂಡ ಸರ್ವೇ ನಂ. 95 ರಲ್ಲಿ 1 ಎಕರೆ ಜಮೀನಿನ ಪಹಣಿ ನಿಮ್ಮ ಹೆಸರಿಗೆ ಬರುತ್ತಿರುವುದು ಎಂದರೆ ಸಾಕ್ಷಿಯು ಅದು ನನ್ನ ಅಣ್ಣಂದಿರು ಹೇಗೆ ಮಾಡಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸರ್ವೇ ನಂ.95 ದುರಸ್ತು ಆಗಿ ಸರ್ವೇ ನಂ.107 ಎಂದು ಸುಮಾರು 10 ವರ್ಷಗಳ ಹಿಂದೆ ಆಗಿರುತ್ತದೆ. ಸರ್ವೇ ನಂ.107ರ ಪಹಣಿಯಲ್ಲಿ 1 ಎಕರೆ ಮಾತ್ರ ನಿಮ್ಮ ಹೆಸರಿಗೆ ಬರುತ್ತಿದೆ ಎಂದರೆ ಸಾಕ್ಷಿಯು ಅದು ಹೇಗೆ ಮಾಡಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ, ಅದಕ್ಕಾಗಿ ಈ ದಾವೆಯನ್ನು ಹೂಡಿರುವುದು ಎಂದು ನುಡಿಯುತ್ತಾರೆ.

ಹಳೆ ಮನೆಯಲ್ಲಿ ನನಗೆ ಅರ್ಧ ಭಾಗ ಬಂದಿರುತ್ತದೆ ಎಂದರೆ ಸರಿ . ಸರ್ವೇ ನಂ.95 ರಲ್ಲಿ 2 ಎಕರೆ ಉಳುಮೆ ಮಾಡುತ್ತಿದ್ದೆ ಎಂದು ತೋರಿಸಲು ಹಿಡುವಳಿ ದೃಡೀಕರಣ ಪತ್ರ ಆಗಲೀ ಅಥವಾ ಸರ್ವೇ ಮಹಜರ್ ಆಗಲೀ ಹಾಜರು ಪಡಿಸಿಲ್ಲ.

1ನೇ ಪ್ರತಿವಾದಿಯ ಹಿಸ್ಸೆಗೆ ಸರ್ವೇ ನಂ. 4 ರಲ್ಲಿ 1 ಗುಂಟೆ, ಸರ್ವೇ ನಂ.15ರಲ್ಲಿ 20 ಗುಂಟೆ, ಸರ್ವೇ ನಂ.18/1ರಲ್ಲಿ 5 ಗುಂಟೆ, ಸರ್ವೇ ನಂ.21 ರಲ್ಲಿ 1 ಎಕರೆ 8 ಗುಂಟೆ, ಸರ್ವೇ ನಂ. 28 ರಲ್ಲಿ 1 ಎಕರೆ, ಸರ್ವೇ ನಂ. 95 ರಲ್ಲಿ 1 ಎಕರೆ ಹಾಗೂ ಹಳೆ ಮನೆಯಲ್ಲಿ ಅರ್ಧ ಭಾಗದ ಹಿಸ್ಸೆ ಬಂದಿತ್ತು ಎಂದರೆ ಸರಿ .

2ನೇ ಪ್ರತಿವಾದಿಯ ಹಿಸ್ಸೆಗೆ ಸರ್ವೇ ನಂ.4 ರಲ್ಲಿ 1 ಗುಂಟೆ, ಸರ್ವೇ ನಂ.15 ರಲ್ಲಿ 1 ಎಕರೆ 2 ವರೆ ಗುಂಟೆ, ಸರ್ವೇ ನಂ.18/1 ರಲ್ಲಿ 5 ಗುಂಟೆ, ಸರ್ವೇ ನಂ.21 ರಲ್ಲಿ 33 ಗುಂಟೆ, ಸರ್ವೇ ನಂ. 28 ರಲ್ಲಿ 15 ಗುಂಟೆ, ಸರ್ವೇ ನಂ.95ರಲ್ಲಿ 1 ಎಕರೆ ಹಾಗೂ ಇನ್ನೊಂದು ಹಳೆ ಮನೆ ಬಂದಿರುತ್ತದೆ ಎಂದರೆ ಸಾಕ್ಷಿಯು ಸದರಿ ಜಮೀನು ಅವರ ಹಿಸ್ಸೆಗೆ ಬಂದಿರುತ್ತದೆ ಆದರೆ ಅವರ ಹಿಸ್ಸೆಗೆ ಮನೆ ಬಂದಿಲ್ಲ ಎಂದು ನುಡಿಯುತ್ತಾರೆ. ನಾನು ಹಾಗೂ 2ನೇ ಪ್ರತಿವಾದಿ ಒಂದೇ ಮನೆಯಲ್ಲಿ ವಾಸವಾಗಿದ್ದೆವು ಎಂದು ನುಡಿಯುತ್ತಾರೆ.

ನಮ್ಮ ತಂದೆ ತಾಯಿಯ ಜೀವನಾಂಶಕ್ಕೆಂದು ಬಿಟ್ಟಿದ್ದ ಸರ್ವೇ ನಂ. 21 ರಲ್ಲಿ 1 ಎಕರೆ ಹಾಗೂ ಸರ್ವೇ ನಂ.95 ರಲ್ಲಿ 1 ಎಕರೆ ಭೂಮಿಯ ಪೈಕಿ ನಮ್ಮ ತಂದೆ ತಾಯಿ ಮರಣ ಹೊಂದಿದ ನಂತರ ಸರ್ವೇ ನಂ. 21 ರಲ್ಲಿ ಬಿಟ್ಟಿದ್ದ ಸ್ವತ್ತನ್ನು ನಾನು ಹಾಗೂ ಇಬ್ಬರು ಪ್ರತಿವಾದಿಯರು ಸಮವಾಗಿ ಹಂಚಿಕೊಳ್ಳುವುದು ಎಂದು ಒಪ್ಪಂದ ಆಗಿತ್ತು ಎಂದರೆ ಸರಿ . ಸರ್ವೇ ನಂ.95 ರಲ್ಲಿ ನನ್ನ ತಂದೆ ತಾಯಿಯ ಜೀವನಾಂಶಕ್ಕೆಂದು ಬಿಟ್ಟಿದ್ದ 1 ಎಕರೆ ಸ್ವತ್ತನ್ನು 2ನೇ ಪ್ರತಿವಾದಿಯ ಹಿಸ್ಸೆಯ ದಕ್ಷಿಣ ದಿಕ್ಕಿಗೆ ಬಿಡಲಾಗಿತ್ತು ಎಂದರೆ ಸರಿಯಲ್ಲ. ಈ ವಿಚಾರವನ್ನು ದಿ. 05.04.1979ರ ಮೂಲ ಪಾಲುಪಟ್ಟಿಯಲ್ಲಿ ನಮೂದಿಸಲಾಗಿತ್ತು ಎಂದರೆ ಸರಿಯಲ್ಲ. ಸದರಿ ಮೂಲ ಪಾಲುಪಟ್ಟಿ 2 ನೇ ಪ್ರತಿವಾದಿಯ ಬಳಿ ಇದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಮೂಲ ಪಾಲುಪಟ್ಟಿ 2 ನೇ ಪ್ರತಿವಾದಿಯ ಬಳಿ ಇದ್ದುದ್ದನ್ನು ದುರುಪಯೋಗ ಪಡಿಸಿಕೊಂಡು ಸರ್ವೇ ನಂ.95 ರಲ್ಲಿ ಅವರ ಹಿಸ್ಸೆಗೆ 1 ಎಕರೆ ಇದ್ದುದ್ದನ್ನು 2 ಎಕರೆ ಎಂದು ತಿದ್ದುಪಡಿ ಮಾಡಿ ಮೋಸದಿಂದ ಅವರ ಹೆಸರಿಗೆ ಖಾತೆ

ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿ . ಸದರಿ 2 ಎಕರೆ ಸ್ವತ್ತಿನ ಖಾತೆ 2ನೇ ಪ್ರತಿವಾದಿಯ ಹೆಸರಿಗೆ ಬಂದಿದ್ದ ಪೈಕಿ 1 ಎಕರೆ ಸ್ವತ್ತನ್ನು ದಿ. 02.11.2009 ರಂದು ಅವರು ಮಕ್ಕಳಾದ ಪುಟ್ಟರಾಜ ಹಾಗೂ ಶ್ರೀಕಾಂತ ಇವರಿಗೆ ವಿಭಾಗ ಮಾಡಿಕೊಟ್ಟಿರುವುದಾಗಿ ಒಂದು ಮೋಸದ ದಾಖಲೆ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿ . ಸದರಿ 02.11.2009 ರ ದಾಖಲೆ ನನಾಗಲೀ, 1ನೇ ಪ್ರತಿವಾದಿಗಾಗಲೀ ಬದ್ಧಪಡಿಸುವುದಿಲ್ಲ ಎಂದರೆ ಸರಿ . ಸರ್ವೇ ನಂ.95 ರಲ್ಲಿನ 1 ಎಕರೆ ಜಮೀನು ನನಗೆ ಹಾಗೂ ಇಬ್ಬರು ಪ್ರತಿವಾದಿಯರಿಗೆ ಸಮವಾಗಿ ಹಿಸ್ಸೆ ಆಗಬೇಕಾದ ಜಮೀನು ಎಂದರೆ ಸರಿಯಲ್ಲ. ಸಾಕ್ಷಿಯು ಸದರಿ ಸರ್ವೇ ನಂ. ನಲ್ಲಿ ನನಗೆ 2 ಎಕರೆ ಜಮೀನು ಬರಬೇಕಾಗಿತ್ತು ಎಂದು ನುಡಿಯುತ್ತಾರೆ.

ಸದರಿ ಸರ್ವೇ ನಂ.95 ರಲ್ಲಿನ 1 ಎಕರೆ ಸ್ವತ್ತನ್ನು ನೀವು ನಿಮಗೆ ಬರಬೇಕು ಎಂದು ಹೇಳುತ್ತಿದ್ದು, 2ನೇ ಪ್ರತಿವಾದಿ ಸದರಿ ಸ್ವತ್ತು ಅವರಿಗೆ ಬರಬೇಕು ಎಂದು ಹೇಳುತ್ತಿದ್ದು, 1ನೇ ಪ್ರತಿವಾದಿಗೆ ಸದರಿ 1/3 ಎಕರೆ ಸ್ವತ್ತಿನಲ್ಲಿ 1/3 ರ ಹಿಸ್ಸೆ ಬರಬೇಕಾಗಿದ್ದು ಅವರಿಗೆ ಮೋಸ ಮಾಡಬೇಕೇಂದು ನಾನು ಹಾಗೂ 2 ನೇ ಪ್ರತಿವಾದಿ ಸುಳ್ಳು ಹೇಳುತ್ತಿದ್ದೇವೆ ಎಂದರೆ ಸರಿಯಲ್ಲ. ಸದರಿ 1 ಎಕರೆ ಸ್ವತ್ತಿನಲ್ಲಿ 1ನೇ ಪ್ರತಿವಾದಿಗೆ ಹಿಸ್ಸೆ ಬರಬೇಕಾಗಿದ್ದು ಅವರಿಗೆ ಮೋಸ ಮಾಡಬೇಕೆದು 2ನೇ ಪ್ರತಿವಾದಿ ಅವರ ಮಕ್ಕಳ ಹೆಸರಿಗೆ ದಿ. 02.11.2019ರ ಪತ್ರವನ್ನು ಸೃಷ್ಟಿಸಿದ್ದು ಹಾಗೂ ನಾನು ಈ ದಾವೆಯನ್ನು ಸಲ್ಲಿಸಿರುವುದು ಎಂದರೆ ಸರಿಯಲ್ಲ. ಸಾಕ್ಷಿಯು ನಾನು ದಡ್ಡ ಆಗಿದ್ದರಿಂದ ಸದರಿ ಸರ್ವೇ ನಂ.ನಲ್ಲಿ ನನಗೆ 2 ಎಕರೆ ಸ್ವತ್ತು ನನ್ನ ತಂದೆ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ.

ದಾವಾನುಸೂಚಿ ಐಟಂ ನಂ. 9 ರ ಖಾತೆ 2ನೇ ಪ್ರತಿವಾದಿಯ ಹೆಸರಿನಲ್ಲಿ ಈಗ ಇರುತ್ತದೆ. ಐಟಂ ನಂ. 10 ರ ಖಾತೆ ನನ್ನ ಹೆಸರಿನಲ್ಲಿ ಇರುತ್ತದೆ. ಸದರಿ ಐಟಂ ನಂ. 9 ಹಾಗೂ 10ರ ಸ್ವತ್ತುಗಳು ಯಾರ ಯಾರ

ಹೆಸರಿನಲ್ಲಿ ಇದೆ ಎನ್ನುವುದಕ್ಕೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲಾಗಿದೆ. ದಿ.05.04.1979 ರಂದು ಆಗಿರುವ ಹಿಸ್ಸೆ ಪಟ್ಟಿಯ ಪ್ರಕಾರ ನಾನು ಜಮೀನಿನ ಸ್ವಾಧೀನದಲ್ಲಿ ಇದ್ದೇನೆ ಎಂದರೆ ಸರಿ . ಸದರಿ ಜಮೀನು ಹಾಗೂ ಮನೆಯ ನಿಮ್ಮ ಸ್ವಾಧೀನಕ್ಕೆ ಯಾರು ತೊಂದರೆ ಕೊಟ್ಟಿಲ್ಲ ಎಂದರೆ ಸಾಕ್ಷಿಯು ಇಬ್ಬರೂ ಪ್ರತಿವಾದಿಯರು ತೊಂದರೆ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ . ಆ ರೀತಿ ತೊಂದರೆ ಕೊಟ್ಟಾಗ ಪೋಲೀಸರಿಗೆ ದೂರನ್ನು ಕೊಟ್ಟಿರುತ್ತೇನೆ. ನಾನು ದೂರು ಕೊಟ್ಟಿರುತ್ತೇನೆ ಎನ್ನುವ ಬಗ್ಗೆ ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ. ದಿ.05.04.1979 ರ ಪಾಲುಪಟ್ಟಿಯ ಪ್ರಕಾರ ನನ್ನ ಹಿಸ್ಸೆಗೆ ಬಂದ ಸ್ವತ್ತಿಗೆ 1 ನೇ ಪ್ರತಿವಾದಿ ಯಾವತ್ತೂ ಕೂಡ ತೊಂದರೆ ನೀಡಿಲ್ಲ ಹಾಗೂ ಅಡ್ಡಿ ಆತಂಕ ಪಡಿಸಿಲ್ಲ ಎಂದರೆ ಸರಿಯಲ್ಲ.

ಸರ್ವೇ ನಂ.95 ರಲ್ಲಿ 1 ನೇ ಪ್ರತಿವಾದಿಗೆ ಬರಬೇಕಾದ ಹಿಸ್ಸೆಯನ್ನು ಲಪಟಾಯಿಸಬೇಕೆಂದು 1ನೇ ಪ್ರತಿವಾದಿ ನನ್ನ ಸ್ವಾಧೀನಕ್ಕೆ ತೊಂದರೆ ನೀಡುತ್ತಿದ್ದಾರೆ ಎಂದು ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ- ಇಲ್ಲ.**

(ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೆ.ಸ.ಇ.

ಜೆ.ಎಂ.ಎಫ್.ಸಿ., ಹೊಳೆನರಸೀಪುರ.